Volume: 4 Issue: 6 Pages: 12-15




# ಭಾರತದ ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಯುವಕರ ಪಾತ್ರ: ಗಾಂಧಿ

**[*1] ಡಾ.ಸುಂದ್ರೇಶ .ಎನ್**

[*1] ಸಹಾಯಕ ಪ್ರಾಧ್ಯಾಪಕರು, ಮುಖ್ಯಸ್ಥರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು ಮೈಸೂರು, ಕರ್ನಾಟಕ, ಭಾರತ

**Article Info.**
**E-ISSN: 2583-6528**
**Impact Factor (SJIF): 6.876**
**Peer Reviewed Journal**
**Available online:**
www.alladvancejournal.com

**Received:** 10/ May/2025
**Accepted:** 02/June/2025

***Corresponding Author**
**ಡಾ.ಸುಂದ್ರೇಶ .ಎನ್**
ಸಹಾಯಕ ಪ್ರಾಧ್ಯಾಪಕರು, ಮುಖ್ಯಸ್ಥರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು ಮೈಸೂರು, ಕರ್ನಾಟಕ, ಭಾರತ

**Abstract**
ಮಹಾತ್ಮರು ಹೋರಾಟದಲ್ಲಿ ಕೇವಲ ಸಾಮ್ರಾಜ್ಯಶಾಹಿಯ ವಿರುದ್ಧವಲ್ಲದೇ ಭಾರತದಲ್ಲಿನ ಬಡತನ, ಜನಾಂಗ, ಧರ್ಮ, ಜಾತಿಗಳಲ್ಲಿದ್ದ ತಾರತಮ್ಯದ ವಿರುದ್ಧದ ಅವರ ಭಾಷಣಗಳು, ಚರ್ಚೆಗಳು ಕೇವಲ ಅಕ್ಷರಸ್ಥರನ್ನಲ್ಲದೆ ಅನಕ್ಷರಸ್ಥರನ್ನು ಬಡಿದೆಬ್ಬಿಸಿದವು ಮತ್ತು ಪ್ರಭಾವಿಸಿದವು. ಭಾರತ ನಿರ್ಮಾಣದಲ್ಲಿ ಅವರ ಆಲೋಚನೆ, ಚಿಂತನೆಗಳು, ಹೋರಾಟ ವಿಧಾನಗಳು, ಆದರ್ಶಗಳು ಇಂದಿಗೂ ಪ್ರಸ್ತುತವಾಗಿದ್ದು ಇಂದಿನ ಯುವ ಪೀಳಿಗೆಗೆ ಸ್ಪೂರ್ತಿದಾಯಕವಾಗುವಂತಿದೆ. ಈ ಲೇಖನವೂ ಅಂತಹ ಭಾಷಣಗಳಲ್ಲಿ ಯುವಜನರನ್ನು ಉದ್ದೇಶಿಸಿ ಮಹಾತ್ಮ ಗಾಂಧೀಯವರ ಮಾತಿನ ತುಣುಕುಗಳನ್ನು ಹಂಚಿಕೊಳ್ಳಲಾಗಿದೆ.

**Keywords:** ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಯುವಜನತೆಯ ಪಾಲ್ಗೊಳ್ಳುವಿಕೆ ಮತ್ತು ಅಗತ್ಯದ ಬಗ್ಗೆ ಮಹಾತ್ಮರ ಅಭಿಪ್ರಾಯ

## Introduction

ಮಹಾತ್ಮಾ ಗಾಂಧಿ ಜಗತ್ತು ಕಂಡ ಒಬ್ಬ ಸರ್ವ ಶ್ರೇಷ್ಠ ಜನಸಾಮಾನ್ಯರ ನಾಯಕ...ಇವರ ಜೀವನ ಮತ್ತು ಬೋಧನೆಗಳು ಸ್ವಾತಂತ್ರ್ಯದ ಹೋರಾಟದ ಸಂದರ್ಭದಲ್ಲಿ ಯುವಜನರಲ್ಲಿ ಸ್ಪೂರ್ತಿಯ ಚಿಲುಮೆಯಾಗಿತ್ತು. ಇವರ ಸತ್ಯಾಗ್ರಹ ಮತ್ತು ಅಸಹಕಾರದಂತಹ ಆಯುಧಗಳು ಯುವಜನತೆಯಲ್ಲಿ ಬೀರಿದ ಪ್ರಭಾವ ಅಚ್ಚಳಿಯದೇ ಉಳಿದಿರುವುದು ಅವರ ಜೀವನಕ್ಕೆ ಸಾಕ್ಷಿಯಾಗಿದೆ.

'My faith is in the younger generation, the Modern generation they will work out the whole problem like Lion"

ಎಂಬ ಸ್ವಾಮಿ ವಿವೇಕಾನಂದರ ಮಾತಿನಂತೆ ಮಹಾತ್ಮ ಗಾಂಧಿಯವರು ಸತ್ಯ ಮತ್ತು ಅಹಿಂಸೆಯ ಅಮರತತ್ವಗಳ ಆಧಾರದ ಮೇಲೆ ಆದರ್ಶ ಸಮ-ಸಮಾಜವನ್ನು ಸ್ಥಾಪಿಸುವ ಸಾಮರ್ಥ್ಯವಿರುವವರು ಭಾರತದ ಯುವಜನತೆ ಇವರನ್ನು ರಚನಾತ್ಮಕ ಕೆಲಸದಲ್ಲಿ ತೊಡಗಿಸಿಕೊಳ್ಳುವ ಮೂಲಕ ದೇಶದ ಎಲ್ಲಾ ಭಾಗಗಳಿಗೂ ರಾಷ್ಟ್ರೀಯ ಶಿಕ್ಷಣವನ್ನು ಜಾರಿಗೆ ತಂದು ದೇಶದಲ್ಲಿ ಉನ್ನತ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಯುವ ಸಮುದಾಯ ಒಂದು ಸೇತುವೆ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತದೆ ಎಂಬ ಅಧಮ್ಯ ವಿಶ್ವಾಸದಲ್ಲಿ ಗಾಂಧೀಯವರು ಹಲವಾರು ಸಭೆ ಮತ್ತು ಸಮಾರಂಭಗಳನ್ನು ಭಾಷಣ, ಚರ್ಚೆಗಳನ್ನು ನಡೆಸುವುದರ ಮೂಲಕ ಯುವ ಜನತೆಯನ್ನು ಜಾಗೃತಗೊಳಿಸುವಲ್ಲಿ ಯಶಸ್ವಿಯಾದರು. ಇಷ್ಟೇ ಅಲ್ಲದೇ ಜಗತ್ತಿನಾದ್ಯಂತ ಅವರ ಪ್ರಭಾವಕ್ಕೆ ಸಾಕ್ಷಿಯಾಗಿ ನೆಲ್ಸನ್ ಮಂಡೇಲಾ, ಬರಾಕ್ ಒಬಾಮಾ, ಅಣ್ಣಾ ಹಜಾರೆಯಂತಹ ಹಲವರು ಗಾಂಧೀ ತತ್ವ ಮತ್ತು ಆದರ್ಶಗಳ ಆಧಾರದ ಮೇಲೆ ತಮ್ಮ ಹೋರಾಟಗಳನ್ನು ಗುರುತಿಸಿಕೊಂಡಿದ್ದಾರೆ. ಮಹಾತ್ಮರು ಹೋರಾಟದಲ್ಲಿ ಕೇವಲ ಸಾಮ್ರಾಜ್ಯಶಾಹಿಯ ವಿರುದ್ಧವಲ್ಲದೇ ಭಾರತದಲ್ಲಿನ ಬಡತನ, ಜನಾಂಗ, ಧರ್ಮ, ಜಾತಿಗಳಲ್ಲಿದ್ದ ತಾರತಮ್ಯದ ವಿರುದ್ಧದ ಅವರ ಭಾಷಣಗಳು, ಚರ್ಚೆಗಳು ಕೇವಲ ಅಕ್ಷರಸ್ಥರನ್ನಲ್ಲದೆ ಅನಕ್ಷರಸ್ಥರನ್ನು ಬಡಿದೆಬ್ಬಿಸಿದವು ಮತ್ತು ಪ್ರಭಾವಿಸಿದವು. ಭಾರತ ನಿರ್ಮಾಣದಲ್ಲಿ ಅವರ ಆಲೋಚನೆ, ಚಿಂತನೆಗಳು, ಹೋರಾಟ ವಿಧಾನಗಳು, ಆದರ್ಶಗಳು ಇಂದಿಗೂ ಪ್ರಸ್ತುತವಾಗಿದ್ದು ಇಂದಿನ ಯುವ ಪೀಳಿಗೆಗೆ ಸ್ಪೂರ್ತಿದಾಯಕವಾಗುವಂತಿದೆ. ಈ ಲೇಖನವೂ ಅಂತಹ ಭಾಷಣಗಳಲ್ಲಿ ಯುವಜನರನ್ನು ಉದ್ದೇಶಿಸಿ ಮಹಾತ್ಮ ಗಾಂಧೀಯವರ ಮಾತಿನ ತುಣುಕುಗಳನ್ನು ಹಂಚಿಕೊಳ್ಳಲಾಗಿದೆ.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಯುವ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಮತ್ತು ಅದರ ಅಗತ್ಯದ ಬಗ್ಗೆ ಅರಿವಿದ್ದ ಮಹಾತ್ಮ ಗಾಂಧೀಯವರು ವಿದ್ಯಾರ್ಥಿಗಳ ಕುರಿತು ಸಾಲು ಸಾಲು ಭಾಷಣಗಳು ಮತ್ತು ಚರ್ಚೆಗಳ ಮೂಲಕ ವಿದ್ಯಾರ್ಥಿಗಳನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರೆಪಿಸಿದ್ದು ಈಗ ಇತಿಹಾಸವಾಗಿದೆ. ಸ್ವರಾಜ್ಯದ ಕನಸು ನನಸಾಗಬೇಕಾದರೆ ವಿದ್ಯಾರ್ಥಿಗಳು ರಾಷ್ಟ್ರೀಯ ಶಿಕ್ಷಣದ ಮಹತ್ವ ತಿಳಿದುಕೊಳ್ಳಬೇಕು ಮತ್ತು ಸರ್ಕಾರಿ ಶಾಲಾ ಕಾಲೇಜುಗಳನ್ನು ತೊರೆದು ರಾಷ್ಟ್ರೀಯ ಸ್ವಾಮ್ಯದ ಶಾಲಾಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಮತ್ತು ವಿದ್ಯಾರ್ಥಿಗಳು ರಾಷ್ಟ್ರೀಯ ಶಾಲೆಗಳಲ್ಲಿ ದಾಖಲಾಗುವ ಮೂಲಕ ಸ್ವರಾಜ್ಯದ ಕನಸನ್ನು ನನಸು ಮಾಡಲು ವಿದ್ಯಾರ್ಥಿಗಳು ಕೈ ಜೋಡಿಸಬೇಕೆಂದು ಇದಕ್ಕಾಗಿ ವಿದ್ಯಾರ್ಥಿಗಳ ಕುರಿತು ನಿರಂತರ ಸಭೆ-ಸಮಾರಂಭಗಳು ಚರ್ಚೆಗಳ ಮೂಲಕ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಹೋರಾಟ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಜನಸಮುದಾಯದ ಹೋರಾಟಕ್ಕೆ ಹೆಚ್ಚು ಮಹತ್ವ ನೀಡಿದರು ಸ್ವಾತಂತ್ರ್ಯ ಹೋರಾಟ ಕೇವಲ ನಾಲ್ಕು ಗೋಡೆಗಳ ಮಧ್ಯ ಇದ್ದ ಸಂದರ್ಭದಲ್ಲಿ ತಿಲಕರು ಮತ್ತು ಗಾಂಧಿಯವರು ಹೋರಾಟವು ಜನಸಮುದಾಯದ ಹೋರಾಟವಾಗಿ ಪರಿವರ್ತಿಸಿ ಹೋರಾಟಗಳನ್ನು ಸಾಮಾಜಿಕ ಜವಾಬ್ದಾರಿಯನ್ನಾಗಿ ಮಾರ್ಪಡಿಸಿ ಹೋರಾಟದ ದಿಕ್ಕನ್ನೆ ಬದಲಾಯಿಸಿದರು.

ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ರಾಷ್ಟ್ರೀಯ ಶಾಲೆಯ ಸ್ಥಾಪನೆಯ ಹೋರಾಟವೂ ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಮುಂಚೂಣಿಗೆ ಬಂದಿತು. ರಾಷ್ಟ್ರೀಯ ಶಾಲೆಯ ಹೋರಾಟವು ಸ್ವಾತಂತ್ರ್ಯ ಹೋರಾಟವನ್ನು ಸಂಘಟಿಸಲು, ಸಜ್ಜುಗೋಳಿಸಲು ಮತ್ತು ಹೋರಾಟವನ್ನು ರೂಪಿಸಲು ಸಹಕಾರಿಯಾಯಿತು. ಇದರ ಫಲಿತಾಂಶವಾಗಿ ರಾಷ್ಟ್ರೀಯ ಶಾಲೆಗಳು ಭಾರತಾದ್ಯಂತ ಸ್ಥಾಪನೆಯಾಗಿ ಹೊಸ ಅಲೆಯನ್ನು ಮತ್ತು ರಾಷ್ಟ್ರೀಯ ಹೋರಾಟವು ಜನಸಾಮಾನ್ಯರಲ್ಲಿ ಪ್ರಜ್ಞೆಯನ್ನು ಮೂಡಿಸಲು ಮತ್ತು ವಿದ್ಯಾರ್ಥಿಗಳ ದೊಡ್ಡ ಸಮೂಹವನ್ನು ಹೋರಾಟಕ್ಕೆ ಸಜ್ಜುಗೊಳಿಸಿತು. ರಾಷ್ಟ್ರೀಯ ಶಾಲೆಗಳು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ "ತೀವ್ರಗಾಮಿ ಹೋರಾಟದ" ಪ್ರಮುಖ ಕೇಂದ್ರವೂ ಆಗಿತ್ತು. ೧೯೩೦ರ ಕಾನೂನುಭಂಗ ಚಳುವಳಿ ಸಂದರ್ಭದಲ್ಲಿಯೂ ರಾಷ್ಟ್ರೀಯ ಶಾಲೆಗಳು ಸ್ವಾತಂತ್ರ್ಯ ಚಟುವಟಿಕೆಯ ಕೇಂದ್ರಗಳಾಗಿ ಕಾರ್ಯನಿರ್ವಹಿಸಿದ್ದವು.

ಹಲವಾರು ಸ್ವಾತಂತ್ರ್ಯಹೋರಾಟಗಾರರು ಯುಜನತೆಯಲ್ಲಿ ಸ್ವರಾಜ್ಯದ ಕನಸು ಬಿತ್ತಲು ಸಾಕಷ್ಟು ಪ್ರಯತ್ನ ಮಾಡಿದರು. ಮಹಾತ್ಮಾ ಗಾಂಧೀಯವರು ಹೇಳುವ ಪ್ರಕಾರ ಯುವಜನತೆಯಲ್ಲಿ ಸ್ವಯಂ ಮಾತ್ರ ದೇಶದ ಬಗ್ಗೆ ಸ್ವಾಭಿಮಾನ ಮತ್ತು ದೇಶಾಭಿಮಾನ ಹುಟ್ಟಿದರೆ ಮಾತ್ರ ಸ್ವರಾಜ್ಯದ ಕನಸು ನನಸಾಗಲು ಸಾಧ್ಯ ಎಂದು ಭಾವಿಸಿ ತಮ್ಮ ಭಾಷಣಗಳಲ್ಲಿ ಸ್ವರಾಜ್ಯ ಮತ್ತು ದೇಶದ ಯುವಜನತೆಯನ್ನು ಉದ್ದೇಶಿಸಿ ಸಾಲು ಸಾಲು ಭಾಷಣಗಳನ್ನು ನೀಡಿದ್ದಾರೆ. ಇದರ ಪ್ರಕಾರ " ಯುವಕರು ಸಾಮಾಜಿಕ ಬದಲಾವಣೆಯ ಏಜೆಂಟ್ ಇದ್ದ ಹಾಗೆ ಸತ್ಯ ಮತ್ತು ಅಹಿಂಸೆಯ ಅಮರತತ್ವಗಳ ಆಧಾರದ ಮೇಲೆ ಆದರ್ಶ ಸಮಾಜವನ್ನು ಸ್ಥಾಪಿಸುವ ಸಾಮರ್ಥ್ಯ ಹೊಂದಿದ್ದಾರೆ." ಯಾವಾಗಲು ಪ್ರಯೋಗಕ್ಕೆ ಒಳಗಾಗಲು ಬಯಸುವ ಸಮೂಹವೆಂದರೆ ಅದು ಯುವ ಸಮುದಾಯ, ಈ ಯುವ ಸಂಘಟನೆಗಳ ಸದಸ್ಯರು ಪ್ರಾಮಾಣಿಕತೆಯಿಂದ ಮತ್ತು ದೇಶಕ್ಕೆ ಸರಿಯಾದ ಕೆಲಸವನ್ನು ಮಾಡುವ ಏಕೈಕ ಉದ್ದೇಶದಿಂದ ಕೆಲಸ ಮಾಡಿದರೆ ಅನೇಕ ಮಹತ್ತರವಾದ ಸಾಧನೆಗಳನ್ನು ಮಾಡಲು ಸಾಧ್ಯವಾಗುತ್ತದೆ. [1]

ಯುವಕರು ತಮ್ಮ ಗ್ರಾಮೀಣ ಜೀವನವನ್ನು ತಮ್ಮ ಗುರಿಯನ್ನಾಗಿಸಿಕೊಳ್ಳಬೇಕು, ಏಕೆಂದರೆ ಅವರ ಐತಿಹಾಸಿಕ ಪ್ರಸಿದ್ಧ ನಾಗರೀಕತೆ ಮತ್ತು ಮೂಲಬೇರು ಇರುವುದು ಗ್ರಾಮಗಳಲ್ಲಿ ಮಾತ್ರ ದೇಶದ ಯುವಕರು ತಮ್ಮ ಜೀವನವನ್ನು ಪುನ:ನಿರ್ಮಿಸಲು ಮತ್ತು ತಮ್ಮ ಕಾಲೇಜುಗಳು ಅಥವಾ ಪ್ರೌಢಶಾಲೆಗಳ ಸುತ್ತಮುತ್ತಲಿನ ಗ್ರಾಮಗಳಲ್ಲಿ ತಮ್ಮ ರಜೆಯ ಪ್ರತಿದಿನವನ್ನು ಕಳೆಯಬೇಕು ಆಗ ವಿದ್ಯಾರ್ಥಿಗಳಲ್ಲಿ ತಮ್ಮ ಸ್ವಂತಿಕೆ ಬಗ್ಗೆ ಹೆಮ್ಮೆ ಮೂಡುತ್ತದೆ ಎಂದು ಹೇಳಿದರು. [2]

"ಯುವಕರು ಶಿಕ್ಷಣ, ನಿಷೇದ, ಬಹಿಷ್ಕಾರ, ಆರೋಗ್ಯ ಮತ್ತು ನೈರ್ಮಲ್ಯ ಕ್ಷೇತ್ರಗಳಿಗೆ ಹೆಚ್ಚಿನ ಕೊಡುಗೆಗಳನ್ನು ಕೊಡಬೇಕು. ಜೊತೆಗೆ ಗ್ರಾಮೀಣ ಭಾಗದ ಜನರಿಗೆ ಆ ಸೌಲಭ್ಯಗಳನ್ನು ಒದಗಿಸಬೇಕು ಹಾಗೆಯೇ ತಮ್ಮಲ್ಲಿರುವ ತಪ್ಪು ಪರಿಕಲ್ಪನೆಗಳನ್ನು ತೆಗೆದು ದೇಶದ ಸೇವೆಗೆ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಸಾರಿದರು."

ಸ್ವರಾಜ್ಯ ಎಂದರೆ "ಮೊದಲ ಮತ್ತು ಕೊನೆಯ ಹೆಜ್ಜೆ ಎಂದರೆ ನಮ್ಮನ್ನು ನಾವು ಶುದ್ದೀಕರಣ ಮಾಡಿಕೊಳ್ಳುವುದೇ ಆಗಿದೆ." ಸ್ವರಾಜ್ಯ ಎಂಬುದು ಒಂದು ಮರುಜನ್ಮ ಇದ್ದ ಹಾಗೆ ನಮ್ಮ ಗುಲಾಮಗಿರಿ ಮನಸ್ಥಿತಿಯಿಂದ ಹೊರಬಂದು ದೇಶಕಟ್ಟುವ ಕಡೆಗೆ ಮತ್ತು ದೇಶಕ್ಕಾಗಿ ಸ್ವರಾಜ್ಯವನ್ನು ಪ್ರಾಮಾಣಿಕವಾಗಿ ಬಯಸಿದಾಗ ಮಾತ್ರ ಸ್ವರಾಜ್ಯದ ಕನಸು ನನಸಾಗುತ್ತದೆ ಎಂದು ಯುವಕರಲ್ಲಿ ಚರ್ಚಿಸಿದ್ದರು. ಮಹಾತ್ಮರು ಯುವಜನತೆ ಜೊತೆ ಸಾಕಷ್ಟು ಚರ್ಚೆ ಮತ್ತು ಉಪನ್ಯಾಸಗಳು, ಸಭೆ ಸಮಾರಂಭಗಳಲ್ಲಿ ಈ ಕೆಳಗಿನ ಅಂಶಗಳನ್ನು ಹಂಚಿಕೊಳ್ಳುತ್ತಿದ್ದರು. ಮೊದಲಿಗೆ ಸ್ವಾತಂತ್ರ್ಯದ ಕನಸು ನನಸಾಗಬೇಕಾದರೆ ಮೊದಲು ವಿದ್ಯಾರ್ಥಿಗಳು ಸ್ವಾತಂತ್ರ್ಯವನ್ನು ಬಯಸಬೇಕು ಅವರಲ್ಲಿ ಸ್ವಾತಂತ್ರ್ಯ ಪ್ರಜ್ಞೆ ಬಂದು ಸಾಮ್ರಾಜ್ಯಶಾಹಿ ಬಗ್ಗೆ ತಿಳಿಯಬೇಕು ಮತ್ತು ತಾವು ವಾಸಿಸುವ ನೆಲ-ಜಲ ಭೂಮಿಯ ಬಗ್ಗೆ ಧನ್ಯತೆಯನ್ನು ಹೊಂದಿರಬೇಕು. ಆಗ ಸ್ವಾತಂತ್ರ್ಯ ಪಡೆಯುವುದು ಸುಲಭವಾಗುತ್ತದೆ ಎಂದು ೧೯೨೦ ರ ನವಜೀವನದ ಪತ್ರಿಕೆಯಲ್ಲಿ ತಿಳಿಸಿದ್ದಾರೆ. ಹಾಗೆಯೇ ವಿದ್ಯಾರ್ಥಿಗಳು ಮೊದಲು ಮನುಷ್ಯರಾಗಲು ಕಲಿಯಬೇಕು ಅದೇ ಮುಖ್ಯ ಶಿಕ್ಷಣ. ಇಡೀ ರಾಷ್ಟ್ರದ ಧ್ವನಿ ಒಂದೇ ಆದಾಗ ಮಾತ್ರ "ಸ್ವರಾಜ್ಯದ" ಕನಸು ನನಸಾಗುತ್ತದೆ. ಆಗ ದೇಶದಲ್ಲಿನ ಪರಕೀಯರ ಅಧೀನತೆ ತನ್ನಷ್ಟಕ್ಕೆ ತಾನೇ ಹೋಗುತ್ತದೆ ಎಂದಿದ್ದಾರೆ. [3]

ಮಹಾತ್ಮ ಗಾಂಧೀಯವರು ತಮ್ಮ ಹಿಂದ್ ಸ್ವರಾಜ್‌ನಲ್ಲಿ "ಭಾರತೀಯ ಯುವಜನತೆಗೆ ಹಲವು ಮೌಲ್ಯಯುತ ಸಂದೇಶಗಳನ್ನು ನೀಡಿದ್ದಾರೆ." ಅದರಲ್ಲಿ ಪ್ರಮುಖವಾಗಿ "ಯುವಜನತೆ ಕುಡಿತದಂತಹ ದುಶ್ಚಟಗಳಿಗೆ ಆಸ್ಪದ ನೀಡಬಾರದು. ಈ ಚಟಗಳು ಯುವಕರ ವಿವೇಚನೆ ಮತ್ತು ಬುದ್ಧಿವಂತಿಕೆಯನ್ನು ಮರೆಮಾಚುತ್ತದೆ. ಯುವಕರಿಗೆ ಇರಬೇಕಾದ ನೈತಿಕತೆ, ಆಧ್ಯಾತ್ಮಿಕತೆ, ಅಹಿಂಸೆ ಮತ್ತು ಸ್ವಯಂ ಶಿಸ್ತಿನ ಮಾರ್ಗಗಳÀನ್ನು ಸೂಚಿಸಿದರು. ಹಾಗೆಯೇ ೭ ಸಾಮಾಜಿಕ ಪಾಪಗಳ ಕುರಿತು ಹೇಳಿದ್ದಾರೆ ಅವುಗಳೆಂದರೆ....." [4]

1. Politics without Principles
2. Wealth without work
3. Pleasure without conscience
4. Knowledge without character
5. Commerce without morality
6. Science without Humanity
7. Worship without sacrifice

ನನ್ನ ಭರವಸೆ ದೇಶದ ಯುವಕರಲ್ಲಿದೆ ದುಶ್ಚಟಗಳಿಗೆ ಬಲಿಯಾಗುವವರು ಸ್ವಭಾವತಹ ಕೆಟ್ಟವರಲ್ಲ ಅವರು ಅಸಹಾಯಕರಾಗಿ ಮತ್ತು ಆಲೋಚನೆಯಿಲ್ಲದೆ ಅದರತ್ತ

ಆಕರ್ಷಿತರಾಗುತ್ತಿದ್ದಾರೆ. ಇದರಿಂದ ಸಮಾಜಕ್ಕೆ ಮತ್ತು ತಮಗೆ ಆಗುವ ಹಾನಿಯ ಬಗ್ಗೆ ಅರಿತುಕೊಳ್ಳಬೇಕು. ಕಠಿಣ ಶಿಸ್ತಿನ ಜೀವನವಲ್ಲದೆ ಬೇರೇನೂ ತಮ್ಮನ್ನೂ ಮತ್ತು ದೇಶವನ್ನು ಸಂಪೂರ್ಣ ವಿನಾಶದಿಂದ ರಕ್ಷಿಸುವುದಿಲ್ಲ ಎಂದು ಯುವಕರು ಅರ್ಥಮಾಡಿಕೊಳ್ಳಬೇಕು. ದೇಶಕ್ಕೆ ಸ್ವಾತಂತ್ರ್ಯ ಪಡೆಯಲು ಎಂತಹ ಹುಡುಗರು ಬೇಕೆಂದರೆ ಸಮಯ ಬಂದಾಗ ಎಲ್ಲಾ ತ್ಯಾಗಗಳಿಗೆ ಸಿದ್ಧರಾಗಿರಬೇಕು ಅಂದರೆ...ಗಲ್ಲು ಶಿಕ್ಷೆಯಾದರು ದೇಶಕ್ಕಾಗಿ ಹೋರಾಡುವ ವಿದ್ಯಾರ್ಥಿಗಳು ಮಾತ್ರ ನನಗೆ ಬೇಕು ಎಂದು ವಿದ್ಯಾರ್ಥಿಗಳನ್ನು ಉತ್ತೇಜಿಸಿ ಸ್ಫೂರ್ತಿದಾಯಕ ಭಾಷಣ ಮಾಡಿದ್ದರು. [5]

ಮೆಕಾಲೆ ಆಧಾರಿತ ಇಂಗ್ಲೀಷ್ ಶಿಕ್ಷಣದ ಪ್ರಭಾವ ಹೆಚ್ಚಿದ ಸಮಯದಲ್ಲಿ ರಾಷ್ಟ್ರೀಯ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ದೇಶದಾದ್ಯಂತ ಅದರ ಬಗ್ಗೆ ಚಳುವಳಿಗಳು ನಡೆದವು.. "ಜ್ಞಾನ ಸ್ವಾತಂತ್ರ್ಯದ ಬೀಜಗಳನ್ನು ಬೀರುವುದು, ಅದಕ್ಕೆ ಶಿಕ್ಷಣವೇ ಮುಕ್ತಿಗೆ ಸೋಪಾನ " ಎಂಬAತೆ ಮಹಾತ್ಮಾ ಗಾಂಧೀಯವರು ರಾಷ್ಟ್ರೀಯ ಶಿಕ್ಷಣ ಮತ್ತು ಶಿಕ್ಷಣದ ಅಗತ್ಯತೆ ಬಗ್ಗೆ ಸಾಕಷ್ಟು ಶಾಲಾ-ಕಾಲೇಜುಗಳಲ್ಲಿ ಮತ್ತು ಸಭೆ-ಸಮಾರಂಭಗಳಲ್ಲಿ ರಾಷ್ಟ್ರೀಯ ಶಿಕ್ಷಣದ ಮೌಲ್ಯ ಮತ್ತು ಅದರ ಅಗತ್ಯತೆ ಬಗ್ಗೆ ಸಾಲು ಸಾಲು ಭಾಷಣಗಳನ್ನು ಮಾಡಿರುವ ಸಾಕಷ್ಟು ನಿದರ್ಶನಗಳು ನಮ್ಮ ಮುಂದಿವೆ.

ಅದರಂತೆ ವಿದ್ಯಾರ್ಥಿಗಳು ಮೊದಲು ಸರ್ಕಾರಿ ಶಾಲೆಗಳನ್ನು ತೊರೆಯಬೇಕು(ಸಾಮ್ರಾಜ್ಯಶಾಹಿ ಹಿಡಿತದಲ್ಲಿರುವ ಶಾಲೆಗಳು) ಶಾಲೆ ತೊರೆಯುವುದರಿಂದ ಅವರು ಅವಿದ್ಯಾವಂತರಾದರು ಅಥವಾ ಅಲ್ಪಜ್ಞಾನಿಗಳಾದರು ಪರವಾಗಿಲ್ಲ ಸ್ವಾಭಿಮಾನ ಒಂದಿದ್ದರೆ ಸಾಕು, ಇನ್ನೆಲ್ಲವೂ ತನ್ನಷ್ಟಕ್ಕೆ ತಾನೇ ಹಿಂಬಾಲಿಸುತ್ತವೆ ಎಂದು ಹೇಳಿದರು. ವಿದ್ಯಾರ್ಥಿಗಳಿಗೆ ಎಂತಹ ಶಿಕ್ಷಣ ಉಪಯೋಗಕ್ಕೆ ಬರುತ್ತದೆ ಎಂದರೆ “ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ತನ್ನ ದೇಶದ ಬಗ್ಗೆ ಆತ್ಮಾಭಿಮಾನ, ಉತ್ತಮವಾದ ದೇಶಭಕ್ತಿ ಮತ್ತು ಸ್ವರಾಜ್ಯವನ್ನು ಪಡೆಯಲು ಒಬ್ಬ ವ್ಯಕ್ತಿ ಹೇಗೆ ಜೀವನದಲ್ಲಿ ತ್ಯಾಗ ಮಾಡಲು ಸಿದ್ಧನಿರಬೇಕು ಎಂಬುದನ್ನು ಶಿಕ್ಷಣ ಸಂಸ್ಥೆಗಳು ನೀಡುವಂತಿರಬೇಕು ” ಎಂದು ಬಾಂಬೆ ಶಾಲೆಯ ಉದ್ಘಾಟನೆ ಸಂದರ್ಭದಲ್ಲಿ ಹೇಳಿದರು. [6]

ಮಹಾತ್ಮ ಗಾಂಧೀಯವರು ತಮ್ಮ ಹಿಂದ್ ಸ್ವರಾಜ್ ಕೃತಿಯಲ್ಲಿ ಶಿಕ್ಷಣ ಎಂದರೆ ಹೇಗಿರಬೇಕು ಎಂದು ಪ್ರೋಫೆಸರ್ ಹಕ್ಸ್ಲೇರವರ ಅಭಿಪ್ರಾಯವನ್ನು ಹಂಚಿಕೊAಡಿದ್ದಾರೆ.....ಅವರ ಪ್ರಕಾರ ಶಿಕ್ಷಣ ಎಂದರೆ..."ತನ್ನ ದೇಹ ತನಗೆ ದಾಸನಾಗಿ, ಹೇಳಿದ ಕೆಲಸವನ್ನು ಸರಾಗವಾಗಿ ಸಂತೋಷವಾಗಿ ಶಕ್ತಿಯಿದ್ದಷ್ಟು ಮಾಡುವಂತೆ ಯಾರಿಗೆ ತಾರುಣ್ಯದಲ್ಲಿ ಶಿಕ್ಷಣ ದೊರೆತಿದೆಯೋ: ಯಾರ ಬುದ್ಧಿ ಶುದ್ದ, ಶಾಂತ, ನ್ಯಾಯದರ್ಶಿ ಆಗಿದೆಯೋ:ಯಾರ ಮನಸ್ಸು ಪ್ರಕೃತಿ ನಿಯಮಗಳ ಜ್ಞಾನದಿಂದ ಪೂರ್ಣವಾಗಿದೆಯೋ; ಯಾರ ಇಂದ್ರಿಯಗಳು ನಿಗ್ರಹಿತವೋ; ಯಾರ ಅಂತರಾತ್ಮ ಪರಿಶುದ್ಧವೋ; ಯಾರಿಗೆ ನೀಚ ಕಾರ್ಯವೆಂದರೆ ಹೇಸಿಗೆಯೋ; ಯಾರು ತನ್ನಂತೆಯೇ ಪರರನ್ನು ಕಾಣುತ್ತಾನೋ, ಅವನು ನಿಜವಾಗಿ ಶಿಕ್ಷಿತ. ಅವನು ಪ್ರಕೃತಿ ನಿಯಮದಂತೆ ನಡೆಯುತ್ತಾನೆ. ನಿಜವಾಗಿ ಅವನೇ ಸರಿಯಾದ ಶಿಕ್ಷಣ ಪಡೆದವನು, ಪ್ರಕೃತಿಯನ್ನು ಅವನು ಉತ್ತಮ ರೀತಿಯಲ್ಲಿ ಉಪಯೋಗಿಸಿ ಕೊಂಡಾನು, ಪ್ರಕೃತಿ ಅವನನ್ನು ಉತ್ತಮವಾಗಿ ಉಪಯೋಗಿಸಿತು." [7]

ಆಗ್ರಾದಲ್ಲಿ ಮಾತನಾಡುತ್ತಾ "ನಮ್ಮೆಲ್ಲ÷ರಿಗೂ ಎಂತಹ ಶಿಕ್ಷಣ ಬೇಕೆಂದರೆ ಭಯವೂ ನಮ್ಮ ಜೀವನದಲ್ಲಿ ಸಮಾನಂತರವಾಗಿ ಸೇರಿದೆ. ಅಂತಹ ಭಯವನ್ನು ಹೋಗಲಾಡಿಸಲು ನಮಗೆ ಸಹಾಯ ಮಾಡದ ಶಿಕ್ಷಣದ ಪ್ರಯೋಜನವೇನು ? ಸತ್ಯವನ್ನು ಅನುಸರಿಸಲು ಮತ್ತು ದೇಶ ಭಕ್ತಿಯನ್ನು ಬೆಳೆಸಲು ನಮಗೆ ಕಲಿಸದ ಶಿಕ್ಷಣವು ಯಾವ ರೀತಿಯ ಶಿಕ್ಷಣವಾಗಿದೆ? ಅಂತಹ ಶಿಕ್ಷಣವನ್ನು ತಿರಸ್ಕರಿಸಿ ರಾಷ್ಟ್ರೀಯ ಶಿಕ್ಷಣವನ್ನು ಬೆಂಬಲಿಸಬೇಕು ಎಂದು ಹೇಳಿದರು." ಮುಂದುವರೆಯುತ್ತಾ ಸಾಮ್ರಾಜ್ಯಶಾಹಿ ಕೊಡುವ ಶಿಕ್ಷಣವು ಕೆಟ್ಟದಾಗಿದೆ ಎಂಬ ಕಾರಣದಿಂದ ನಾವು ಅದನ್ನು ತ್ಯಜಿಸಬೇಕು ಎಂದು ಅಲ್ಲ ನಮ್ಮನ್ನು ಗುಲಾಮಗಿರಿಯಲ್ಲಿ ಹಿಡಿದಿಟ್ಟುಕೊಂಡಿರುವವರು ಒದಗಿಸಿದ ಕಾರಣ ನಾವು ಅದನ್ನೂ ಸ್ವೀಕರಿಸಬಾರದು ಎಂಬುದು ಗಾಂಧೀಜಿಯವರ ವಾದವಾಗಿತ್ತು. ಹೇಗೆ ಗುಲಾಮನು ತನ್ನ ಮಾಲಿಕರಿಂದ ಸ್ವಾತಂತ್ರ್ಯದ ಪಾಠವನ್ನು ಕಲಿಯುವುದಿಲ್ಲವೋ ಹಾಗೆ ಅವರಿಂದ ಪಡೆದ ಶಿಕ್ಷಣವೂ ಸ್ವೀಕಾರ್ಹವಲ್ಲವೆಂದು ಹೇಳಿದರು. ಸಾಮ್ರಾಜ್ಯಶಾಹಿಯು ನಿಮಗೆ ನಿಜವಾಗಿ ಶಿಕ್ಷಣದಲ್ಲಿ ಸ್ವಾತಂತ್ರ್ಯವನ್ನು ನೀಡುವುದಿಲ್ಲ ಬದಲಾಗಿ ಸಾಮ್ರಾಜ್ಯಶಾಹಿಶಕ್ತಿಯು ಎಲ್ಲವನ್ನೂ ನೀಡುತ್ತಿದೆ ಎಂದು ನಂಬುವAತೆ ನಿಮ್ಮನ್ನೂ ಮೋಸಗೊಳಿಸುತ್ತದೆ. ವಾಸ್ತವವಾಗಿ ನಮ್ಮ ದೇಶದಿOzಲೇ ಸುಲಿಗೆ ಮಾಡಿದ ಹಣದಿಂದ ನಿಮಗೆ ಶಿಕ್ಷಣ ನೀಡಬಯಸುವ ಇವರು ಅದೇ ಮನುಷ್ಯನಿಂದ ಕದ್ದ ಹಣದಿಂದ ಅವನಿಗೆ ಕುಡಿಯಲು ಹಣ ಕೊಟ್ಟಂತೆ ಎಂದು ಸಾಮ್ರಾಜ್ಯಶಾಹಿಯ ಶಿಕ್ಷಣವನ್ನು ವಿರೋಧಿಸಿದ್ದಾರೆ. [8]

ಒಬ್ಬ ಇಂಗ್ಲೀಷ್ ಹುಡುಗ ಶಾಲೆ ಅಥವಾ ಕಾಲೇಜಿನಿಂದ ಹೊರಬಂದಾಗ ಬದುಕಿಗೆ ಅಥವಾ ದುಡಿಮೆಗೆ ಬೇಕಾಗುವ ಶಕ್ತಿ ಅವನಲ್ಲಿರುತ್ತದೆ. ಆದರೆ ಭಾರತೀಯ ಹುಡುಗರಲ್ಲಿ ಶಿಕ್ಷಣ ಸಂಪೂರ್ಣವಾದ ಕೂಡಲೇ ವಕೀಲ ಅಥವಾ ಸರ್ಕಾರದ ಹಕ್ಕನ್ನು ಪಡೆಯಲು ಬಯಸುತ್ತಾನೆ. ಅಂತವರಿಗೆ ಮಾತ್ರ ಈ ಸಾಮ್ರಾಜ್ಯಶಾಹಿ ಮಾದರಿಯ ಶಿಕ್ಷಣ ಅನುಕೂಲವಾಗುತ್ತದೆ. ಸಾಮ್ರಾಜ್ಯಶಾಹಿಯ ಶಾಲೆಗಳಲ್ಲಿ ಸ್ವಾತಂತ್ರ್ಯದ ಪಾಠಗಳನ್ನು ಹೇಳುವುದಿಲ್ಲ ಎಂದೂ ಭಾವಿಸುವವರು, ದೇವರ ಆಜ್ಞೆಯನ್ನು ಯಾರು ಕೇಳುವರು....ಅವರು ನಿಜವಾದ ಸ್ವಾತಂತ್ರ್ಯದ ಪಡೆಯುವ ಹಕ್ಕುವುಳ್ಳವರಾಗಿದ್ದಾರೆ. ಈ ಸಾಮ್ರಾಜ್ಯಶಾಹಿಯ ಕಪಿಮುಷ್ಟಿಯಲ್ಲಿ ಒಂದು ಕ್ಷಣ ಕಾಲ ಕೂಡ ಬದುಕಲು ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ನೀವು ಅದೇ ರೀತಿ ಭಾವಿಸಿದರೆ ನಿಮಗಾಗಿ ಪರ್ಯಾಯ ಶಾಲೆಗಳು ಒದಗಿಸಲಾಗಿದೆಯೇ ಎಂದು ನೀವು ಕೇಳಲು ಬಯಸುವುದಿಲ್ಲ; ಯಾವುದೇ ಷರತ್ತುಗಳಿಲ್ಲದೇ ನೀವು ಶಾಲೆ ಮತ್ತು ಕಾಲೇಜು ಬಿಡುವುದು ಸ್ವಾತಂತ್ರ್ಯದ ಮೊದಲ ಪಾಠ ಮತ್ತು ಶಾಲೆ ತೊರೆದ ನಂತರ ಉಚಿತ ಶಾಲೆಗಳು ಸ್ಥಾಪನೆಯಾಗುವವರೆಗೂ ಸಂಗ್ರಹಿಸುವಷ್ಟು ಅಥವಾ ಸಂಪಾದನೆ ಮಾಡಲಾರದಷ್ಟು ತಾಳ್ಮೆ ಇರದಿದ್ದಲ್ಲಿ ಖಂಡಿತ ಶಾಲೆಗಳನ್ನು ಬಿಡಬೇಡಿ ಎಂದು ಹೇಳಿದರು. [9]

ರಾಷ್ಟ್ರೀಯ ಶಿಕ್ಷಣದ ಮಹತ್ವ ವಿದ್ಯಾರ್ಥಿಗಳಲ್ಲಿ ಎಷ್ಟು ಆಳವಾಗಿ ಬೇರೂರಿತ್ತೆಂದರೆ ಬಾಂಬೆಯಲ್ಲಿ ಎರಡು ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ತಮ್ಮ ಅಂತಿಮ ಪದವಿ ಪರೀಕ್ಷೆಯನ್ನು ನಿರಾಕರಿಸಿ ರಾಷ್ಟ್ರೀಯ ಶಿಕ್ಷಣದ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮತ್ತಿಬ್ಬರು ಸ್ನಾತಕೋತ್ತರ ಪದವಿಯಲ್ಲಿ 50 ರೂಪಾಯಿ ವಿದ್ಯಾರ್ಥಿ ವೇತನ ಪಡೆಯುವುದನ್ನು ತ್ಯಜಿಸಿ ರಾಷ್ಟ್ರೀಯ ಶಿಕ್ಷಣದ ಕೆಲಸದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದನ್ನು ಗಾಂಧೀಜಿ ಬರೆದುಕೊಂಡಿದ್ದಾರೆ. [10]

ಈ ರೀತಿಯಾಗಿ ಸ್ವಾತಂತ್ರ್ಯದ ಸಂದರ್ಭದಲ್ಲಿ ಯುವಜನರಿಗೆ ಅದರಲ್ಲೂ ವಿದ್ಯಾರ್ಥಿಗಳಿಗೆ ನೈತಿಕತೆ ಮತ್ತು ರಾಷ್ಟ್ರೀಯ ಶಿಕ್ಷಣದ ಮಹತ್ವದ ಬಗ್ಗೆ ತಿಳಿಸಲು ಪ್ರಯತ್ನಿಸಿದ ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಯಲ್ಲಿಯೇ ವಿದ್ಯಾರ್ಥಿಗಳ ಯುವಮನಸ್ಸುಗಳನ್ನು ರಾಷ್ಟ್ರ ನಿರ್ಮಾಣದಲ್ಲಿ ಕ್ರಿಯಾಶೀಲರಾಗಿ ಮತ್ತು ಸಶಕ್ತರನ್ನಾಗಿ ಮಾಡಿ ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ರಾಷ್ಟ್ರೀಯ ಶಿಕ್ಷಣದ ಮಹತ್ವವನ್ನು ಸಾರಿದರು.

## References


1. Indian Opinion 28/4/1906
2. Young India 7/11/1929
3. The Collected work of Mahathma Gandhi, 18, 333.
4. Ignou-Gandhis View on Children and Youth- Unit-II-111
5. The Collected work of Mahathma Gandhi. 1920; 19(12-8):18.
6. The Collected work of Mahathma Gandhi, Bombay. 1921; 20:266.
7. Hind Swarj (Kannada), 80.
8. The Collected work of Mahathma Gandhi. 1920; 19(23):16.
9. Gandhi Views on Children and Youth-(Ignou, University Unit II)-111.
10. The Collected work of Mahathma Gandhi. 1920; 18(7-11):341.